# ಶ್ರೀಮಾತೆ

ಮೂಲ ಬಂಗಾಳಿ : **ಆಶುತೋಷ್ ಮಿತ್ರ**

ಅನುವಾದ : **ಸ್ವಾಮಿ ಜ್ಞಾನಯೋಗಾನಂದ**

## ಭಾಗ ೭

ಪ್ರಸನ್ನ ಮಾವ ಸಿಮ್ಲಾ ಸ್ಟ್ರೀಟಿನಲ್ಲಿ ಒಂದು ಸಣ್ಣ ಹೆಂಚಿನ ಮನೆಯನ್ನು ಬಾಡಿಗೆಗೆ ತೆಗೆದುಕೊಂಡು, ಊರಿನಿಂದ ದೊಡ್ಡತ್ತೆ (ನಳಿನಿಯ ತಾಯಿ) ಇಬ್ಬರು ಹೆಣ್ಣು ಮಕ್ಕಳು – ನಳಿನಿ ಹಾಗೂ ಮಾಕು, ಅಳಿಯ ಪ್ರಮಥ (ನಳಿನಿಯ ಪತಿ) ಇವರನ್ನು ಕರೆದು ಕೊಂಡು ಬಂದ. ಪ್ರಮಥನ ಹೆಸರು ಈ ಗ್ರಂಥದಲ್ಲಿ ಹಿಂದೊಮ್ಮೆ ಬಂದಿತ್ತು, ಅವನ ವಿವಾಹದ ಸಂದರ್ಭದಲ್ಲಿ. ಈಗ ಮಾವನ ಮನೆಗೆ ಬಂದ ಮೇಲೆ ಅವನಿಗೆ ಅನಾರೋಗ್ಯವುಂಟಾ ಯಿತು. ಈ ವಿಷಯವನ್ನು ತಿಳಿದ ಶ್ರೀಮಾತೆ, ನನ್ನನ್ನು ಅಲ್ಲಿಗೆ ಹೋಗು ವಂತೆ ಆದೇಶಿಸಿದರು. ಅಂತೆಯೇ ನಾನು ಅಲ್ಲಿಗೆ ಹೋದೆ. ಅದು ಸಾಧಾರಣ ಕಾಯಿಲೆಯಲ್ಲ; ಕೆಮ್ಮು ಜ್ವರ — ಬಿಡುವೇ ಇಲ್ಲ ದಂಥ ಜ್ವರ. ಶರತ್ ಮಹಾರಾಜ್ ಹಾಗೂ ಮಾಸ್ಟರ್ ಮಹಾ ಶಯರ ಆಲೋಚನೆಯ ಪ್ರಕಾರ ಇಬ್ಬರು ಪ್ರಸಿದ್ಧ ಡಾಕ್ಟರರನ್ನು ಅಲ್ಲಿಗೆ ಕರೆದುಕೊಂಡು ಹೋಗುವುದಾಗಿ ನಿಶ್ಚಯವಾಯಿತು. ಅವರಿಬ್ಬರೂ ಒಂದೆಡೆ ಕುಳಿತು ಚರ್ಚಿಸಿ ಚಿಕಿತ್ಸೆ ಮಾಡುವುದಾಗಿ ತೀರ್ಮಾನಿಸಿದರು. ಡಾಕ್ಟರ್‌ಗಳು ಬರುವುದಕ್ಕೆ ಎರಡು ಗಂಟೆ ಮೊದಲೇ ಸಿಮ್ಲಾ ಸ್ಟ್ರೀಟ್‌ನಲ್ಲೇ ಪ್ರಸನ್ನ ಮಾವನ ಮನೆಯನ್ನು ಹುಡುಕುತ್ತ ಹೋದೆ. ಒಂದು ಮನೆಯ ಬಾಗಿಲಲ್ಲಿ, ಒಬ್ಬ ಡಾಕ್ಟ ರರ ಹೆಸರಿದ್ದ ಫಲಕವೊಂದು ಕಣ್ಣಿಗೆ ಬಿತ್ತು.

ಅವರ ಹೆಸರನ್ನು ನೋಡಿ, ಅವರೊಂದಿಗೆ ನನಗೆ ತುಸು ಪರಿ ಚಯವಿದ್ದಂತೆ ಅನ್ನಿಸಿತು. ಇನ್ನೂ ಬೇಕಾದಷ್ಟು ಸಮಯವಿದೆ ಯಲ್ಲ ಎಂದುಕೊಂಡು ಆ ಮನೆಯನ್ನು ಪ್ರವೇಶಿಸಿ, ಹಜಾರದಲ್ಲಿ ಕುಳಿತಿದ್ದ ಒಬ್ಬ ಯುವಕ ಡಾಕ್ಟರನನ್ನು ಕಂಡೆ. ಅವನ ಕೈಯ ಲ್ಲೊಂದು ಹೈಪೋಡರ್ಮಿಕ್ ಇಂಜೆಕ್ಷನ್ ಕೂಡಾ ಇತ್ತು. ನನಗೆ ಕುಳಿತುಕೊಳ್ಳಲು ಹೇಳಿದ; ನಾನು ಕುಳಿತೆ. ಅವನೇ ಸ್ವತಃ ಇಂಜೆ ಕ್ಷನ್ ತೆಗೆದುಕೊಳ್ಳುತ್ತಿದ್ದ. ಅದನ್ನು ನೋಡಿ ಅವನನ್ನು ಕೇಳಿದೆ, ''ನಿಮಗೆ ಅನಾರೋಗ್ಯವೇನಾದರೂ ಇದೆಯೆ?'' ಅದಕ್ಕೆ ಉತ್ತರ ವಾಗಿ ತುಸು ಕಾಯಲು ಹೇಳಿದನಾತ. ಅನಂತರ ತನ್ನ ದೇಹವನ್ನು ಒರಗುದಿಂಬಿಗೆ ಒರಗಿಸಿಕೊಂಡು ಸುಮ್ಮನೆ ಕುಳಿತ. ಅವನೇನೋ ಚಿಂತೆ ಮಾಡುತ್ತಿದ್ದಂತೆ ಕಂಡುಬಂತು. ಅನಂತರ ಆ ದಿಂಬನ್ನು ಎಸೆದು ನನ್ನ ಹತ್ತಿರ ಬಂದು ಕುಳಿತ. ಅಸ್ಪಷ್ಟವಾದ ಧ್ವನಿಯಲ್ಲಿ ಹೇಳಿದ, ''ಹೇಳುತ್ತೇನೆ, ಎಲ್ಲವನ್ನೂ ಹೇಳಿಬಿಡುತ್ತೇನೆ. ಇಲ್ಲ ದಿದ್ದರೆ ನೀವೇ ಏಕೆ ಈ ವೇಳೆ ಇಲ್ಲಿಗೆ ಬರಬೇಕು? ನಿಮಗೆ ಹೇಳಲೇ ಬೇಕು.'' ಇನ್ನೂ ಏನೇನೋ ಹೇಳಹೊರಟಿದ್ದ. ಮತ್ತೆ ಆತ ಸುಮ್ಮನೆ ಕುಳಿತ. ನನಗನ್ನಿಸಿತು, ಇಂಜೆಕ್ಷನ್ ಪರಿಣಾಮವಾಗಿ ಅವನಿಗೆ



ಬುದ್ಧಿಭ್ರಮಣೆಯಾಗಿರಬೇಕು ಎಂದು. ಮತ್ತೆ ಅವನು ಸಹಜ ಸ್ಥಿತಿಗೆ ಮರಳಿ ಹೇಳಿದ, ''ನೀನು ನನ್ನ ಸ್ನೇಹಿತ, ನನ್ನ ಹಿತೈಷಿ. ಇಲ್ಲದಿದ್ದರೆ ಈ ವೇಳೆ ಯಾಕಾದರೂ ಬರುತ್ತಿದ್ದೆ? ನಾನು ಆಲೋ ಚಿಸಿದೆ, ನಿನಗೆಲ್ಲವನ್ನೂ ಹೇಳಬೇಕು ಅಂತ.''

ಅದನ್ನು ಕೇಳಿ ನನಗನ್ನಿಸಿತು, ಬಹುಶಃ ಅವನದೇನೋ ವೈಯ ಕ್ತಿಕವಾದ ರಹಸ್ಯ ವಿಚಾರವಿರಬೇಕು. ಅದನ್ನು ಅವನು ಹೇಳ ಬಯಸುತ್ತಿದ್ದಾನೆ. ಅವನು ಅದನ್ನು ಹೇಳಲಾರಂಭಿಸಿದರೆ ಮುಗಿ ಯುವುದು ತಡವಾಗಬಹುದೇನೋ. ಅಲ್ಲದೆ, ನಾನು ಯಾವ ಕೆಲಸಕ್ಕಾಗಿ ಬಂದಿದ್ದೆನೋ, ಅದಕ್ಕೆ ಇನ್ನು ಹೆಚ್ಚು ಸಮಯ ಉಳಿ ದಿಲ್ಲ. ಇನ್ನು ಕಾಯುವುದು ಸರಿಯಿಲ್ಲವೆಂದು ಭಾವಿಸಿ ಅವನಿಗೆ ಹೇಳಿದೆ, ''ನಿಮ್ಮ ಕಥೆಯನ್ನು ಹಿಂದಿರುಗಿ ಬರುತ್ತಾ ಕೇಳುತ್ತೇನೆ. ಪಕ್ಕದಲ್ಲೇ ಒಂದು ಮುಖ್ಯ ಕೆಲಸವಿದೆ. ಅದನ್ನು ಮುಗಿಸಿ ಬರು ತ್ತೇನೆ. ಆ ಬಳಿಕ ಅದನ್ನು ಕುರಿತು ಚರ್ಚೆ ಮಾಡೋಣ. ಈಗ ನಾನು ಹೋಗಬೇಕು'' ಎಂದೆ. ನಮ್ಮ ಕೆಲಸವೇನು, ಅದೆಲ್ಲಿ ಎಂದೆಲ್ಲ ಕೇಳಿ ತಿಳಿದ ಅವನು, ಕೂಡಲೇ ನನ್ನೊಂದಿಗೆ ಬಂದ.

ದಾರಿಯಲ್ಲಿ ನಾನೆಂದೆ, ''ಆದರೆ ನಿಮಗೆ ಶುಲ್ಕ ಮಾತ್ರ ಕೊಡಲಾಗದು.'' ಅದಕ್ಕೆ ಆತ, ''ನನ್ನನ್ನು ಯಾರೂ ಕರೆದಿಲ್ಲವಲ್ಲ, ನಾನಾಗಿಯೇ ಬರುತ್ತಿದ್ದೇನೆ'' ಎಂದ. ಹಿಂದೆ ಹೇಳಿದ್ದ ಆ ಇಬ್ಬರು ಡಾಕ್ಟರ್‌ಗಳು ಇನ್ನೂ ಬಂದಿರಲಿಲ್ಲ. ಈತ ರೋಗಿಯನ್ನು ಚೆನ್ನಾಗಿ ಪರೀಕ್ಷೆ ಮಾಡಿ, ಇನ್ನಿಬ್ಬರು ಡಾಕ್ಟರರು ಬಂದರೆ ತನ್ನನ್ನು ಕರೆಯಲು ಹೇಳಿ ಹೊರಟುಹೋದ.

ಸರಿಯಾದ ಸಮಯಕ್ಕೆ ಇಬ್ಬರು ಡಾಕ್ಟರರೂ ಬಂದರು. ನನ್ನ ಆ ಹೊಸ ಸ್ನೇಹಿತನನ್ನು ನಾನೀಗ ಕರೆದುಕೊಂಡು ಬಂದೆ. ಆತ ಉಳಿದ ಇಬ್ಬರಿಗಿಂತಲೂ ತುಂಬ ಕಿರಿಯನಾಗಿದ್ದ. ಬಂದವನೇ ವಿದ್ಯಾರ್ಥಿಯಂತೆ ಒಂದು ಬದಿಯಲ್ಲಿ ನಿಂತುಬಿಟ್ಟ. ಹಿರಿಯ ಡಾಕ್ಟರರಿಬ್ಬರೂ ಪರೀಕ್ಷೆ ಮಾಡಿ ಚರ್ಚಿಸಲಾರಂಭಿಸಿದರು: ''ಟೈಫಾಯ್ಡ್. ಅಂದರೆ, ಚಿಕಿತ್ಸೆಗೆ ಮೊದಲು ರಕ್ತಪರೀಕ್ಷೆ ಮಾಡಿಸಬೇಕು. ರಕ್ತಪರೀಕ್ಷೆಯ ಫಲಿತಾಂಶ ಬಂದ ಮೇಲಷ್ಟೇ ಚಿಕಿತ್ಸೆ ಆರಂಭಿಸಬೇಕು'' ಎಂದರು. ಇಲ್ಲಿಯವರೆಗೆ ಸ್ನೇಹಿತ ಸುಮ್ಮನಿದ್ದ. ಈಗ ಹತ್ತಿರ ಬಂದು ಗೌರವ ವ್ಯಕ್ತಪಡಿಸುತ್ತ ಹೇಳಿದ, ''ರಕ್ತಪರೀಕ್ಷೆ ಮಾಡಿಸುವುದು ಉತ್ತಮ. ಅದರೊಂದಿಗೆ ಉಗುಳನ್ನು ಪರೀಕ್ಷೆ ಮಾಡಿಸುವುದೂ ಒಳಿತು. ನಾನು ನೋಡಿದ್ದೇನೆಂದರೆ, ನನಗನ್ನಿಸುವ ಹಾಗೆ ಇದು ನ್ಯುಮೋನಿಯಾ; ಅಷೇ ಅಲ್ಲ, ಡಬಲ್ ನ್ಯುಮೋನಿಯಾ.'' ಹಿರಿಯ ಡಾಕ್ಟರರು ಮತ್ತೊಮ್ಮೆ ಪರೀಕ್ಷೆ ಮಾಡಿ, ರೋಗಿಯ ಉಗುಳನ್ನು ಪರೀಕ್ಷೆಗಾಗಿ ಕೊಂಡೊಯ್ದರು. ಮಾಸ್ಟರ್ ಮಹಾಶಯ ಹೆಚ್ಚು ಕಡಿಮೆ ಅಲ್ಲೇ ಇದ್ದರು. ಅವರಿಗೆ ಹೊಸ ಡಾಕ್ಟರರ ಪರಿಚಯವಿರಲಿಲ್ಲ.

ಸ್ನೇಹಿತ ನನ್ನನ್ನು ತನ್ನ ಮನೆಗೆ ಕರೆದುಕೊಂಡು ಹೋದ. ರೋಗಿಯ ವಿಷಯವನ್ನು ಮೊದಲು ಹೇಳಿದ: ''ನನ್ನ ಸಿದ್ಧಾಂತ ಸರಿಕಂಡರೆ, ಹಾಗೂ ಚಿಕಿತ್ಸೆ ಮಾಡಿಸುವ ಜವಾಬ್ದಾರಿಯನ್ನು ನನಗೆ ವಹಿಸಲು ನೀವು ಸಿದ್ಧರಿದ್ದರೆ ನಾನು ಚಿಕಿತ್ಸೆ ಮಾಡುತ್ತೇನೆ; ನೀವೂ ಏನೂ ಶುಲ್ಕ ಕೊಡಬೇಕಾಗಿಲ್ಲ. ಆದರೆ ಒಂದು ವಿಷಯ ಮೊದಲೇ ಹೇಳಿಬಿಡುತ್ತೇನೆ: ನಾನು ಏನು ಹೇಳುತ್ತೇನೋ ಹಾಗೇ ಮಾಡಬೇಕು. ಹಳ್ಳಿಯ ದೊಡ್ಡ ವ್ಯಕ್ತಿಗಳ ಮೇಲೆ ಸೇವೆಯ ಭಾರವನ್ನು ಒಪ್ಪಿಸಿಬಿಟ್ಟರೆ ನಡೆಯದು. ನೀವೇ ಸೇವೆ ಮಾಡಬೇಕು. ಹಾಗಿದ್ದರೆ ಮಾತ್ರ ನಾನು ಸಿದ್ಧ'' ಎಂದ.

ಅಷ್ಟು ದೊಡ್ಡ ಡಾಕ್ಟರರ ಮುಂದೆ ನನ್ನ ಸ್ನೇಹಿತ ಸ್ಪಷ್ಟವಾಗಿ ತನ್ನ ವಿಚಾರವನ್ನು ಧೈರ್ಯವಾಗಿ ತಿಳಿಸಿದ್ದನ್ನು ಕಂಡು, ನನಗೆ ಅವನ ಮೇಲೆ ನಂಬಿಕೆಯುಂಟಾಯಿತು. ಮನಸ್ಸಿನಲ್ಲಿಯೇ ನಾನು ಅವನ ತಿಳುವಳಿಕೆಯನ್ನು (ನಿಜವಾಗಿಯೂ ಅವನು ಪರಿಣಿತನಾಗಿದ್ದರೆ) ಹೊಗಳಿಕೊಂಡೆ.

ಸ್ನೇಹಿತ ಚಹಾ ತಂದುಕೊಟ್ಟು, ಬಾಗಿಲು ಹಾಕಿದ. ಇಬ್ಬರೂ ಚಹಾ ಕುಡಿಯುತ್ತಾ ಮಾತುಕತೆ ಆರಂಭಿಸಿದೆವು. ಮೊದಲಿಗೆ ಅವನು ಪೀಠಿಕೆ ಹಾಕಿದ: ''ನಿನಗೇಕೆ ಈ ವಿಷಯವನ್ನೆಲ್ಲ ಹೇಳುತ್ತೇನೋ ನನಗೆ ಗೊತ್ತಿಲ್ಲ. ಆದರೆ ನಿನಗೆ ಹೇಳುತ್ತೇನೆ. ಇಲ್ಲಿಯವರೆಗೂ ನಾನು ಇದನ್ನು ಬೇರೆ ಯಾರಿಗೂ ಹೇಳಿಲ್ಲ. ನಿನಗೆ ಹೇಳಬೇಕೆಂದು ನಿರ್ಧರಿಸಿದ್ದೇನೆ, ನೀನು ಇದನ್ನು ಕೇಳಲೇಬೇಕು'' ಎಂದ. ಅನಂತರ ಹೇಳತೊಡಗಿದ: ''ನಾನು ಇಂಜಕ್ಷನ್ ತೆಗೆದುಕೊಳ್ಳುತ್ತಿದ್ದುದನ್ನು ನೋಡಿದ್ದೆಯಲ್ಲ, ಅದು ಏನು ಗೊತ್ತೆ? ಮೋರ್ಫಿಯಾ! ನಾನು ಮದ್ಯ ಸೇವಿಸತೊಡಗಿದೆ, ಅನಂತರ ಅಫೀಮು ಸೇವಿಸಲಾರಂಭಿಸಿದೆ, ಈಗ ಮೋರ್ಫಿಯಾ! ಒಂದು ನಿಮಿಷ ಕೂಡ ಅದಿಲ್ಲದೆ ಇರಲಾಗದು, ಯಾವಾಗಲೂ ಉನ್ಮತ್ತನಾಗಿಯೇ ಇರಬೇಕೆನ್ನಿಸುತ್ತದೆ'' ಎಂದ. ಸ್ನೇಹಿತ ಎದ್ದುನಿಂತ; ಡ್ರಾಯರ್ ಎಳೆದು ಮದ್ಯದ ಬಾಟಲಿ, ಅಫೀಮಿನ ಮಾತ್ರೆಗಳನ್ನು ತೋರಿಸಿದ.

ನನಗೆ ಸುಮ್ಮನಿರಲಾಗಲಿಲ್ಲ. ಕೇಳಿದೆ, ''ತಮ್ಮಾ, ಯಾಕೆ ನೀನು ಹೀಗೆ ಮಾಡುತ್ತೀಯಾ?''

ಅವನು ಉತ್ತರಿಸಿದ, ''ಯಾಕೆಂದೆ? ಯಾಕೆಂದು ತಿಳಿದಿದ್ದರೆ ಮುಗಿದೇ ಹೋಯಿತಲ್ಲ.'' ''ಇದೇ ನೋಡು ಆತ್ಮಘಾತುಕತನ — ನಿನಗೆ ತಿಳಿಯುತ್ತದೆ ತಾನೆ, ತಮ್ಮಾ?'' ''ಹೌದು, ಅದು ತಿಳಿಯುತ್ತದೆ; ಓದಿ, ಕೇಳಿ ತಿಳಿದುಕೊಂಡಿದ್ದೇನೆ ಕೂಡ. ನನಗೆ ಬದುಕಿ ಉಳಿಯುವ ಇಚ್ಛೆಯಿಲ್ಲ. ಬದುಕುವುದು ಒಳ್ಳೆಯದೂ ಅಲ್ಲ. ಕೊನೆಗೂ ಹಾಗೇ ಮಾಡುತ್ತೇನೆ ನೋಡು.''

ಅವನ ಮರ್ಮಭೇದಿಯಾದ ಕಥೆಯನ್ನು ಕೇಳಿ ನನಗೆ ಎಷ್ಟೊಂದು ಭಾವಾತಿರೇಕವುಂಟಾಯಿತೆಂದರೆ, ಸುಮ್ಮನೆ ಕುಳಿತಿರಲಾಗದೆ ನಾನು ಎದ್ದು ಹೋಗಿ ಅವನನ್ನಪ್ಪಿಕೊಂಡು ಒತ್ತಾಯ ಮಾಡುತ್ತಾ ಹೇಳಿದೆ, ''ಹೇಳು ತಮ್ಮಾ, ನನಗೆ ಮಾತ್ರ ತಿಳಿಯುವಂತೆ ಹೇಳು — ನಿಜವಾಗಿಯೂ ನಿನ್ನ ಮನಸ್ಸಿನ ವೇದನೆಯೇನು, ಯಾತಕ್ಕಾಗಿ ಇದನ್ನೆಲ್ಲ ಮಾಡಲು ಹೊರಟೆ? ನನಗೆ ನನ್ನದು ಅಂತ ಏನೂ ಇಲ್ಲ, ಆದರೂ ಒಂದು ವಿಷಯ ನನಗೆ ಗೊತ್ತು. ಯಾರಲ್ಲಿ ಶರಣಾಗತರಾದರೆ ಮನಸ್ಸಿನ ಎಲ್ಲ ವೇದನೆಗಳೂ ಶಮನಗೊಳ್ಳುವುವೋ, ಎಲ್ಲ ಬೇಗೆಯೂ ಆರಿಹೋಗುವುದೋ, ಆನಂದದಿಂದ ಹೃದಯ ತುಂಬಿ ತುಳುಕಾಡುವುದೋ ಅದನ್ನು ನಾನು ಬಲ್ಲೆ.''

ಅವನು ನನ್ನನ್ನು ಕುಳ್ಳಿರಿಸಿ, ತನ್ನ ಹೃದಯವನ್ನೆಲ್ಲ ತೆರೆದು ಹೇಳಿದ. ನನಗರ್ಥವಾಯಿತು, ಅವನ ಪತ್ನಿಯ ಕೃತಘ್ನತೆಯೇ ಎಲ್ಲ ಅನರ್ಥಗಳಿಗೂ ಮೂಲವೆಂದು.

ಸ್ನೇಹಿತನಿಂದ ಬೀಳ್ಕೊಂಡು ನಾನು ಮೆಡಿಕಲ್ ಕಾಲೇಜಿಗೆ ಹೋದೆ. ಅಲ್ಲಿಂದ ರಕ್ತ ಹಾಗೂ ಉಗುಳಿನ ರಿಪೋರ್ಟ್ ತೆಗೆದುಕೊಂಡು ಬಂದೆ. ಅದನ್ನು ನೋಡಿ ಸ್ನೇಹಿತ ಹೇಳಿದ, ''ನನ್ನ diognosis (ರೋಗನಿರ್ಣಯ) ಸರಿಯಾಗಿತ್ತು. ಈಗ ಎಲ್ಲವೂ ನಿಮ್ಮಿಚ್ಛೆ.'' ನಾನು ಅಂದಿನ ಮಟ್ಟಿಗೆ ವಿದಾಯ ಹೇಳಿ ಬಂದೆ.

ನಾನು ಶ್ರೀಮಾತೆಯವರ ಬಳಿಗೆ ಹೋಗಿ, ರೋಗಿ ಹಾಗೂ ನನ್ನ ಸ್ನೇಹಿತನ ವಿಷಯವನ್ನೆಲ್ಲ ವಿವರಿಸಿ ಹೇಳಿದೆ. ಅವರು ನನ್ನ

ಸ್ನೇಹಿತನ ಕೈಯಿಂದಲೇ ಪ್ರಮಥನಿಗೆ ಚಿಕಿತ್ಸೆ ಮಾಡಿಸಲು ಆದೇಶಿಸಿದರು. ಮರುದಿನದಿಂದ ಅವನ ಬಳಿ ಚಿಕಿತ್ಸೆ ಆರಂಭವಾಯಿತು. ಅವನು ಚಿಕಿತ್ಸೆ ಮಾಡಿಸಲು ಕಾತರನಾಗಿದ್ದ ಎಂದೇನೂ ಅಲ್ಲ; ತನ್ನ ಖರ್ಚಿನಿಂದಲೇ ಅವನು ಒಂದು ಔಷಧಾಲಯದಿಂದ ಔಷಧಿಯನ್ನು ತಂದುಕೊಡುತ್ತಿದ್ದ. ನಾನು ಪ್ರಾಯಶಃ ಇಡೀ ದಿನ ರೋಗಿಯ ಸೇವೆಗಾಗಿ ಅಲ್ಲಿ ಇರಬೇಕಾಗಿತ್ತು. ಮಧ್ಯಾಹ್ನ ಎರಡು ಗಂಟೆ ಕಾಲ ಮಾತ್ರ ಸ್ನೇಹಿತ ನನ್ನನ್ನು ತನ್ನ ಮನೆಯ ಬೈಠಕ್ ಖಾನೆಗೆ ಕರೆದುಕೊಂಡು ಹೋಗುತ್ತಿದ್ದ. ನಮ್ಮ ಒಡನಾಟದಿಂದಾಗಿ ನಮ್ಮ ನಡುವೆ ಸ್ನೇಹ ಗಾಢವಾಗತೊಡಗಿತು. ಪರಿಣಾಮವಾಗಿ, ಅವನು ಹಿಂದೆ ಸೇವಿಸಿದ್ದ ಕಠಿಣ ಔಷಧಿಗಳನ್ನೆಲ್ಲ ಹೊರಹಾಕಲು, ತನ್ನ ಹೃದಯವನ್ನು ಸ್ವಚ್ಛಗೊಳಿಸಿ ಶುಭ್ರ ಬಟ್ಟೆಯಂತೆ ಮಾಡಲು ಯತ್ನಿಸಿದ. ಶ್ರೀಮಾತೆ ಪ್ರತಿದಿನವೂ ಅವನ ಸುದ್ದಿ ಕೇಳಿ ತಿಳಿಯುತ್ತಿದ್ದರು; ಆದರೆ ಸ್ನೇಹಿತ ಶ್ರೀಮಾತೆಯವರ ಬಗ್ಗೆ ಸ್ವಲ್ಪವೂ ಕೇಳಿ ತಿಳಿಯಲಿಲ್ಲ. ನನಗೂ ಅದನ್ನೆಲ್ಲ ತಿಳಿಸಲಾಗಲಿಲ್ಲ.

ನಡುನಡುವೆ ಶ್ರೀಮಾತೆ ಪ್ರಮಥನನ್ನು ನೋಡಲು ಹೋಗುತ್ತಿದ್ದರು. ಕ್ರಮೇಣ ಪ್ರಮಥನಾಥನಿಗೆ ವಾಸಿಯಾಗತೊಡಗಿತು. ಚೆನ್ನಾಗಿ ಬೆಂದ ಅನ್ನವನ್ನು ಊಟ ಮಾಡಲು ಆರಂಭಿಸಿದ. ಅಷ್ಟರಲ್ಲಿ ಒಂದು ದಿನ ಮಾಸ್ಟರ್ ಮಹಾಶಯ ತಮ್ಮ ಝಾಮಾ ಪುಕುರದ ಮನೆಗೆ ಶ್ರೀಮಾತೆಯವರನ್ನು ಕರೆದುಕೊಂಡು ಹೋದರು. ಅದರ ಸಲುವಾಗಿ ಅಂದು ಮಾಸ್ಟರ್ ಮಹಾಶಯನ ಮನೆಯಲ್ಲಿ ಒಂದು ಸಣ್ಣ ಉತ್ಸವವೇ ಜರುಗಿತು. ಶ್ರೀಮಾತೆಯವರೊಂದಿಗೆ ಅವರ ಭಕ್ತೆಯರ ಬಳಗ, ಹಾಗೂ ನಾವೆಲ್ಲರೂ ಇದ್ದೆವು.

ಶ್ರೀಮಾತೆ ಅಲ್ಲಿ ಪೂಜೆ ಮಾಡಲು ಕುಳಿತಿದ್ದರು. ನೈವೇದ್ಯವಾಗಲು ಇನ್ನೂ ಸಮಯವಿದೆ ಎಂದು ತಿಳಿದು, ನಾನು ಸ್ನೇಹಿತನ ಮನೆಗೆ ಹೋದೆ. ಅವನಿಗೆ ಕೂಡಲೇ ನನ್ನೊಂದಿಗೆ ಬರಹೇಳಿದೆ. ಅವನು ಆ ಕ್ಷಣವೇ ನನ್ನೊಂದಿಗೆ ಹೊರಟ. ಪ್ರಮಥನಿಗೇನೋ ಆಗಿರಬೇಕೆಂದು ಅವನು ಆಲೋಚನೆ ಮಾಡಿದ್ದ. ಆದ್ದರಿಂದ ಅಂಗಿ ಹಾಕಿಕೊಳ್ಳದೆ, ಉತ್ತರೀಯವನ್ನು ಮೈಮೇಲೆ ಹಾಕಿಕೊಂಡು ಹೊರಬಂದಿದ್ದ. ಆದರೆ ನಾವು ಬೇರೆ ದಾರಿಯಲ್ಲಿ ಹೊರಟಿದ್ದುದನ್ನು ನೋಡಿ, ''ತಮ್ಮಾ, ನಾವು ಎಲ್ಲಿಗೆ ಹೋಗುತ್ತಿದ್ದೇವೆ?'' ಎಂದು ನನ್ನನ್ನು ಕೇಳಿದ. ನಾನಂದೆ, ''ನೀನು ದೀಕ್ಷೆ ಪಡೆದುಕೊಳ್ಳುವಿಯಂತೆ, ನಡೆ. ಹಾಗಿದ್ದರೆ ಮಾತ್ರ ನಿನಗೆ ಎಲ್ಲವೂ ಒಳ್ಳೆಯದಾಗುವುದು.'' ಅದಕ್ಕೆ ಅವನೆಂದ, ''ನಾನು ಊಟ ಮಾಡಿಬಿಟ್ಟೆನಲ್ಲ!'' ನಾನೆಂದೆ, ''ಶ್ರೀಮಾತೆ ಏನು ಹೇಳುತ್ತಾರೋ ಹಾಗೇ ಆಗುತ್ತದೆ.'' ''ಹಾಗಾದರೆ, ನನ್ನನ್ನು ಶ್ರೀಮಾತೆಯವರ ಬಳಿಗೆ ಕರೆದುಕೊಂಡು ಹೋಗುತ್ತಿದ್ದೀಯಾ?'' ''ಹೌದು. ಅವರ ಪಾದಕಮಲಗಳೇ ಅತ್ಯಂತ ದುರ್ಲಭವಾದ ವಸ್ತು — ಅವರ ವಿಷಯವಾಗಿ ಮೊದಲ ದಿನವೇ ಹೇಳಿದ್ದೆನಲ್ಲ.''

ಮಾತ್ತಿಲ್ಲದೆ ಸ್ನೇಹಿತ ಹೆಜ್ಜೆ ಹಾಕಿದ. ಮಾಸ್ಟರ್ ಮಹಾಶಯರ ಮನೆಗೆ ಹೋಗಿ, ಸ್ನೇಹಿತನನ್ನು ಕೆಳ ಅಂತಸ್ತಿನಲ್ಲಿ ಕುಳ್ಳಿರಲು ಹೇಳಿ, ಮೇಲಂತಸ್ತಿಗೆ ಹೋದೆ. ಅಲ್ಲಿ ಶ್ರೀಮಾತೆಯವರು ಪೂಜೆ ಮಾಡಿ ಮುಗಿಸಿದ್ದರು; ಆದರೆ ಇನ್ನೂ ಅವರು ಆಸನದಲ್ಲಿ ಕುಳಿತೇ ಇದ್ದರು. ಸ್ನೇಹಿತನು ಬಂದು ಕುಳಿತಿರುವ ವಿಷಯವನ್ನು ಅವರಿಗೆ ತಿಳಿಸಿದೆ. ಅವನನ್ನು ಮೇಲಂತಸ್ತಿಗೆ ಕರೆತರಲು ಶ್ರೀಮಾತೆ ಆದೇಶಿಸಿದರು. ಸ್ವಲ್ಪ ಸಮಯದಲ್ಲೇ ನನ್ನ ಸ್ನೇಹಿತ ಶ್ರೀಮಾತೆಯವರ ಶಿಷ್ಯಂದಿರಲ್ಲಿ ಒಬ್ಬನಾದ. ಆಗ ಅವನ ಮುಖದಲ್ಲಿ ಒಂದು ಸ್ವರ್ಗೀಯ ಕಾಂತಿ ಬೆಳಗತೊಡಗಿತು. ಅವನ ಕಣ್ಣುಗಳ ಸುತ್ತ ಹಿಂದಿದ್ದ ಕಪ್ಪು ಛಾಯೆ ಈಗ ಇಲ್ಲದಾಯಿತು. ಪರಿವರ್ತನೆಯಿಂದ ಅವನ ಕಣ್ಣುಗಳಲ್ಲಿ ಒಂದು ಅಲೌಕಿಕ ಬೆಳಗು ಸ್ಪಷ್ಟವಾಗಿ ಕಾಣಿಸಿಕೊಂಡಿತು. ಈಗ ಅವನನ್ನು ನೋಡಿದವರ ಮನಸ್ಸಿನಲ್ಲಿ ಅದೇ ಶ್ರುತಿವಾಣಿ ಏಳಬಹುದು:

**ಭಿದ್ಯತೇ ಹೃದಯಗ್ರಂಥಿಃ ಛಿದ್ಯಂತೇ ಸರ್ವಸಂಶಯಾಃ ।**
**ಕ್ಷೀಯಂತೇ ಚಾಸ್ಯ ಕರ್ಮಾಣಿ ತಸ್ಮಿನ್ ದೃಷ್ಟೇ ಪರಾವರೇ ॥[೧]**

ಮಾಸ್ಟರ್ ಮಹಾಶಯನ ಒತ್ತಾಯದ ಮೇರೆಗೆ ಸ್ನೇಹಿತ ನಮ್ಮೊಂದಿಗೆ ಊಟಕ್ಕೆ ಕುಳಿತ. ಗೋಲಾಪ್ ಮಾ ಎಲ್ಲರಿಗಿಂತ ಮೊದಲು ಸ್ನೇಹಿತನಿಗೆ ಶ್ರೀಮಾತೆಯವರ ಪ್ರಸಾದವನ್ನು ಬಡಿಸಿದರು. ಸ್ನೇಹಿತನು ಅದನ್ನು ತುಂಬು ಭಕ್ತಿಯಿಂದ ಸ್ವೀಕರಿಸಿದ್ದನ್ನು ನಾನು ಗಮನಿಸಿದೆ. ಊಟವಾದ ಮೇಲೆ ತನ್ನ ಅವಸರದ ಕೆಲಸಗಳನ್ನೆಲ್ಲ ಬದಿಗೊತ್ತಿ, ಅವನು ಶ್ರೀಮಾತೆಯವರು ಬಾಗ್‌ಬಜಾರಿಗೆ ಮರಳುವವರೆಗೂ ಅಲ್ಲೇ ಕುಳಿತ. ಶ್ರೀಮಾತೆ ಗಾಡಿಯಲ್ಲಿ ಕುಳಿತುಕೊಳ್ಳಲು ಹೋಗುವಾಗ ಅವನು ಅವರ ಪಾದಧೂಳಿಯನ್ನು ತೆಗೆದುಕೊಂಡ. ಶ್ರೀಮಾತೆ ಕೂಡ ಅವನಿಗೆ ಬಾಗ್‌ಬಜಾರಿಗೆ ಬರಹೇಳಿದರು.

ಅನಂತರ ನನ್ನ ಗಮನಕ್ಕೆ ಬಂದ ವಿಷಯವೇನೆಂದರೆ, ಸ್ನೇಹಿತನ ಬಳಿ ಶ್ರೀಮಾತೆಯವರಿಗೆ ಒಂದಿಷ್ಟೂ ಸಂಕೋಚವುಂಟಾಗಲಿಲ್ಲ ಎಂದು. ಅವರು ನಮ್ಮ ಬಳಿ ಹೇಗೆ ಮುಕ್ತವಾಗಿ ಇರುತ್ತಿದ್ದರೋ, ಹಾಗೆಯೇ ನನ್ನ ಸ್ನೇಹಿತನ ಬಳಿ ಕೂಡ ಇರುತ್ತಿದ್ದರು. ಸ್ನೇಹಿತ ದೀಕ್ಷೆ ಪಡೆಯುವ ತನಕವೂ ಅವನೊಂದಿಗೆ ಏನೇನು ಮಾತುಕತೆ ನಡೆಯಿತೋ, ಅದೆಲ್ಲವೂ ಶ್ರೀಮಾತೆಯವರ ಆಣತಿಗನುಸಾರವೇ ನಡೆಯಿತೆಂದು ಹೇಳಿದರೆ ಹೆಚ್ಚಾಗಬಹುದೇನೋ.

ಓ ಸ್ನೇಹಿತ! ನಿನ್ನ ಬಗ್ಗೆ ಬರೆಯುತ್ತ ಇಂದು ಅನೇಕ ಸಂಗತಿಗಳು ನೆನಪಾಗುತ್ತಿವೆ. ಇಂದು ನೀನು ಆನಂದಧಾಮದಲ್ಲಿರುವೆ!

ಕ್ರಿ.ಶ. ೧೯೦೬-೧೯೦೭ನೇ ಇಸವಿಯಲ್ಲಿ ಪೂರ್ವ ಬಂಗಾಳದಲ್ಲಿ (ಇಂದಿನ ಬಾಂಗ್ಲಾದೇಶದಲ್ಲಿ) ನಾವು ಬರ ಪರಿಹಾರಕಾರ್ಯದಲ್ಲಿ ತೊಡಗಿಕೊಂಡಿದ್ದುದನ್ನು ತಿಳಿದು, ನೀನು ನಿನ್ನ ವೃತ್ತಿ ಹಾಗೂ ಸಂಪಾದನೆಗಳನ್ನು ತ್ಯಜಿಸಿ, ನಿನ್ನ ಬಡೋಬಜಾರ್ ಪ್ರದೇಶದಲ್ಲಿ ಮನೆಮನೆಗೆ ಹೋಗಿ ಸಾವಿರಾರು ರೂಪಾಯಿ ಹಾಗೂ ವಸ್ತ್ರ ಸಂಗ್ರಹ ಮಾಡಿದೆ ನೀನು, ಅದೆಲ್ಲ ನೆನಪಿಗೆ ಬರುತ್ತಿದೆ.

೧. ಮುಂಡಕೋಪನಿಷತ್ತು, ೨.೨.೮. *(-ಸಂ)*

ರಾಮಮಯ ವಿಶ್ವಾಸನಿಗೆ ಶಸ್ತ್ರಚಿಕಿತ್ಸೆ ಮೂಲಕ ಅವನ ಪ್ರಾಣ ಉಳಿಯುವಂತೆ ಮಾಡಿದ್ದು ಇಂದು ನೆನಪಿಗೆ ಬರುತ್ತಿದೆ.

ಜಯರಾಮಬಾಟಿಯಲ್ಲಿ ಬಡೋಪುಕುರದಲ್ಲಿ ಒಂದೆಡೆ ಎಷ್ಟೋ ದಿನಗಳನ್ನು ಕಳೆದಿದ್ದು ಇಂದು ನೆನಪಿಗೆ ಬರುತ್ತಿದೆ.

ಇಂದು ನೆನಪಿಗೆ ಬರುತ್ತಿದೆ — ಶ್ರೀಮಾತೆಯವರ ಬಳಿ ಇಬ್ಬರೂ ಕುಳಿತು ಊಟ ಮಾಡುತ್ತಿದ್ದಾಗ, 'ನೀನು ಬ್ರಾಹ್ಮಣ, ನಾನು ಶೂದ್ರ' ಎಂದು ಜಾತಿಭೇದವನ್ನು ತುಚ್ಛವಾಗಿಸಿ ನನ್ನ ಎಲೆಯಿಂದ ನೀನು ಅನ್ನವನ್ನು ತೆಗೆದುಕೊಂಡೆ — ಅದನ್ನು ನೋಡಿ ಶ್ರೀಮಾತೆ, ''ನೀವಿಬ್ಬರೂ ಒಂದೇ ತಾಯಿಯ ಹೊಟ್ಟೆಯಲ್ಲಿ ಹುಟ್ಟಿದ ಅಣ್ಣತಮ್ಮಂದಿರಂತೆ ಇದ್ದೀರಿ'' ಎಂದರು. ಅದಕ್ಕೆ ಉತ್ತರವಾಗಿ ನೀನು ಹೇಳಿದೆ, ''ಅದೇನೋ ಸರಿ ಅಮ್ಮಾ! ನಾವಿಬ್ಬರೂ ನಿಮ್ಮ ಮಕ್ಕಳು. ಅವನು ದೊಡ್ಡವನು, ನಾನು ಚಿಕ್ಕವನು'' — ಇತ್ಯಾದಿ. ಎಷ್ಟೊಂದು ವಿಷಯಗಳು ನೆನಪಾಗುತ್ತಿವೆ! ...

ಸೋದರಿ ನಿವೇದಿತಾಳ ಶಾಲೆಯ ಗಾಡಿ ಸಿಕ್ಕಿದಾಗಲೆಲ್ಲ ಅದರಲ್ಲಿ ಶ್ರೀಮಾತೆಯವರನ್ನು ಕರೆದುಕೊಂಡು ಸುತ್ತಾಡಿಸಿದೆವು ಎಂದು ಈ ಹಿಂದೆ ಹೇಳಲಾಗಿದೆ. ಒಂದು ಸಲ ಕಾಳಿಕೃಷ್ಣ ಮಹಾರಾಜರಿಗೆ[೨] ಶ್ರೀಮಾತೆಯವರ ಫೋಟೋ ತೆಗೆಯಬೇಕೆಂಬ ಬಯಕೆಯುಂಟಾಯಿತು. ಅವರದೇ ಖರ್ಚಿನಲ್ಲಿ, ಅವರದೇ ವ್ಯವಸ್ಥೆ ಪ್ರಕಾರ ಆ ಗಾಡಿಯಲ್ಲಿ ಶ್ರೀಮಾತೆಯವರನ್ನು ಚೌರಂಗೀ ಎಂಬ ಸ್ಥಳದಲ್ಲಿದ್ದ ವ್ಯಾನ್‌ಡೈಕ್ ಕಂಪೆನಿಯ ಸ್ಟುಡಿಯೋಗೆ ಕರೆದುಕೊಂಡು ಹೋಗಿ, ಅವರ ಫೋಟೋ ತೆಗೆಯಲಾಯಿತು.

ಹಿಂದೆ ಹೇಳಿದ ಲಲಿತಮೋಹನ ಚಟ್ಟೋಪಾಧ್ಯಾಯ ಕಾಂಕುರಗಾಛಿ ಯೋಗೋದ್ಯಾನದ ಭಕ್ತನಾಗಿದ್ದ. ಕ್ರಮೇಣ ನನ್ನೊಡನೆ ಒಡನಾಟ ಆರಂಭವಾಗಿ, ನಡುನಡುವೆ ಅವನು 'ಉದ್ಬೋಧನ'ಕ್ಕೆ ಬರತೊಡಗಿದ.

ಅವನು ಅಲ್ಲಿಗೆ ಬರಲು ಇನ್ನೂ ಒಂದು ಕಾರಣವಿತ್ತು. ಬಸುಪಾಡಾ ಲೇನ್‌ನಲ್ಲಿ ಅವನ ಅತ್ತೆ ವಾಸವಾಗಿದ್ದಳು. ಲಲಿತನು ಆಫೀಸಿಗೆ ಹೋಗುವಾಗ ತನ್ನ ಪತ್ನಿಯನ್ನು ಆಗಾಗ ಅಲ್ಲಿ ಬಿಟ್ಟು ಹೋಗುತ್ತಿದ್ದ; ರಾತ್ರಿ ಮರಳಿ ಬರುವಾಗ ಅಲ್ಲಿಂದ ಕರೆದುಕೊಂಡು ಬರುತ್ತಿದ್ದ. ಈ ಕಾರಣದಿಂದ ಅವನು ಬಸುಪಾಡಾಗೆ ಬಂದಾಗ 'ಉದ್ಬೋಧನ'ಕ್ಕೆ ಬರುತ್ತಿದ್ದ. ಇದಲ್ಲದೆ, ಅವನ ಅತ್ತೆ ಯೋಗಿನ್ ಮಾ ಜೊತೆಗೆ ಗಂಗಾಸ್ನಾನ ಮಾಡುತ್ತ, ಅವರಲ್ಲಿ ಸ್ನೇಹವುಂಟಾಗಿತ್ತು. ಹೀಗೆ ಶ್ರೀಮಾತೆಯವರ ಚಿಕ್ಕಪ್ಪ ಸಾಯುವಾಗ ಅಲ್ಲಿ ಲಲಿತನನ್ನು ನೋಡಿದ್ದೆ. ಅಂದು ಸ್ಮಶಾನ ಘಾಟ್‌ನಲ್ಲಿ ನಮ್ಮೊಂದಿಗೆ ಅವನು ಕೆಲವು ಗಂಟೆಗಳ ಕಾಲ ಮಾತುಕತೆಯಾಡಿದ್ದ. ಅದರ ಪರಿಣಾಮವಾಗಿ ಅವನು 'ಉದ್ಬೋಧನ'ಕ್ಕೆ ಹೆಚ್ಚು ಹೆಚ್ಚು ಬರಲಾರಂಭಿಸಿದ; ಅಷ್ಟೇ ಅಲ್ಲದೆ ನಮ್ಮ ಸ್ನೇಹಿತರ ನಡುವೆ ಒಬ್ಬನಾದ. ಕ್ರಮೇಣ ಆತ್ಮೀಯತೆ ಎಷ್ಟು ಬೆಳೆಯಿತೆಂದರೆ, ಅವನು ದೀಕ್ಷೆ ಪಡೆಯುವ ಸಲುವಾಗಿ ಶ್ರೀಮಾತೆಯವರನ್ನು ಭೂತಾರ್‌ಪಾಡಾ ಲೇನ್‌ನಲ್ಲಿದ್ದ ತನ್ನ ಮನೆಗೆ ಕರೆದುಕೊಂಡು ಹೋದ. ಅಲ್ಲಿ ಒಂದು ಸಣ್ಣ ಸತ್ಸಂಗವನ್ನು ಏರ್ಪಡಿಸಿದ. ಮಾಸ್ಟರ್ ಮಹಾಶಯ, ಡಾಕ್ಟರ್ ಕಂಜಿಲಾಲ್ ಹೀಗೆ ನಮ್ಮಲ್ಲಿ ಕೆಲವರೂ ಅಲ್ಲಿಗೆ ಹೋಗಿದ್ದೆವು. ಶ್ರೀಮಾತೆಯವರೊಂದಿಗೆ ಗೋಲಾಪ್ ಮಾ, ಯೋಗಿನ್ ಮಾ ಮುಂತಾದ ಭಕ್ತೆಯರೂ ಇದ್ದರು.

ನಾವು ಅಲ್ಲಿಗೆ ಹೋದಾಗ ಮಾಸ್ಟರ್ ಮಹಾಶಯ ಈಗಾಗಲೇ ಬಂದು ಕುಳಿತಿದ್ದರು. ಸ್ನೇಹಿತ ಡಾಕ್ಟರ್ ಕಂಜಿಲಾಲ್ ಅನಂತರ ಬಂದರು. ಆ ಕಾರ್ಯಕ್ರಮದಲ್ಲಿ ಶ್ರೀರಾಮಕೃಷ್ಣರ ಪೂಜೆಯಾದ ನಂತರ, ನೈವೇದ್ಯ ಇತ್ಯಾದಿಗಳೆಲ್ಲ ನಡೆದವು. ಅನಂತರ ಲಲಿತನು ತನ್ನ ಪತ್ನಿ ಸಮೇತ ಶ್ರೀಮಾತೆಯವರಿಂದ ದೀಕ್ಷೆ ಪಡೆದ. ಅಂದಿನಿಂದ ಅವನು ಶ್ರೀಮಾತೆಯವರ ಹಾಗೂ ಬೇಲೂರು ಮಠದ ಸೇವೆಗಾಗಿ ತನ್ನನ್ನು ಸಮರ್ಪಿಸಿಕೊಂಡ. ನಾನು ಶ್ರೀಮಾತೆಯವರನ್ನು ಗಮನಿಸುತ್ತಿದ್ದೆ. ಅವರು ಲಲಿತ ಮತ್ತು ಕಂಜಿಲಾಲ್ ಇವರನ್ನು ಕಂಡಾಗಲೆಲ್ಲ ತುಂಬ ಸಂತೋಷಪಡುತ್ತಿದ್ದರು. ಅವರಿಬ್ಬರನ್ನೂ ಶ್ರೀಮಾತೆ ತುಂಬ ಪ್ರೀತಿಸುತ್ತಿದ್ದರು.

ಒಂದು ಸಲ ಲಲಿತನು ಇದ್ದಕ್ಕಿದ್ದಂತೆ ಜಯರಾಮಬಾಟಿಗೆ ಬಂದುಬಿಟ್ಟ. ಮೂರು ದಿನ ಅವನು ಅಲ್ಲೇ ಇದ್ದುಬಿಟ್ಟ. ಅವನನ್ನು ಎಲ್ಲಿ ಕುಳ್ಳಿರಿಸಬೇಕು, ಅವನಿಗೆ ಏನನ್ನು ತಿನ್ನಿಸಬೇಕು ಎಂದೆಲ್ಲ ಶ್ರೀಮಾತೆ ಯಾವಾಗಲೂ ಉತ್ಸುಕತೆಯಿಂದ ಇರುತ್ತಿದ್ದರು. ಅವನು ಮರಳಿ ಹೋಗುವಾಗ ಶ್ರೀಮಾತೆ ಸ್ವಲ್ಪದೂರ ಅವನೊಂದಿಗೇ ಹೋಗಿ ಕಳುಹಿಸಿಕೊಟ್ಟು ಬರುತ್ತಿದ್ದರು.

ಒಂದು ಸಲ ಲಲಿತನಿಗೆ ವಿಪರೀತ ಕಾಯಿಲೆ ಬಂತು. ಡಾಕ್ಟರ್ ಕಂಜಿಲಾಲ್, ಡಾಕ್ಟರ್ ಸರ್ವಾಧಿಕಾರಿ ಮೊದಲಾದ ಪ್ರಸಿದ್ಧ ವೈದ್ಯರೆಲ್ಲ ಬಂದು ಚಿಕಿತ್ಸೆ ಮಾಡತೊಡಗಿದರು. ಶ್ರೀಮಾತೆ ಪ್ರತಿದಿನವೂ ಅವನನ್ನು ನೋಡಿಬರಲು ತಮ್ಮ ಸೇವಕನನ್ನು[೩] ಕಳುಹಿಸುತ್ತಿದ್ದರು. ರೋಗಿಯ ಪರಿಸ್ಥಿತಿ ಗಂಭೀರವಾದಾಗ ಶ್ರೀಮಾತೆ ಸೇವಕನ ಕೈಗೆ ನಿರ್ಮಾಲ್ಯವನ್ನು ಕೊಟ್ಟು ಹೇಳಿದರು, ''ನಿರ್ಮಾಲ್ಯವನ್ನು ಅವನ ತಲೆಯ ಮೇಲೆ ಇಡು. ಅನಂತರ ಹೇಳು, ಅವನಿಗೆ ವಾಸಿಯಾಗುವುದು ಅಂತ. ಆಯುರ್ವೇದ ವೈದ್ಯರು ಅವನಿಗೆ ಚಿಕಿತ್ಸೆ ಮಾಡಲಿ. ನಾನು ಪ್ರತಿದಿನವೂ ಠಾಕೂರರಿಗೆ ತುಳಸೀಪತ್ರ ನೀಡುತ್ತಿದ್ದೇನೆ.'' ನಿಜಕ್ಕೂ ಈ ಬಾರಿ ಲಲಿತನು ಆಯುರ್ವೇದ ವೈದ್ಯರ ಚಿಕಿತ್ಸೆಯಿಂದ ಗುಣಮುಖನಾದ.

ಕಲ್ಕತ್ತೆಗೆ ಹೊಸದಾಗಿ ಗ್ರಾಮ್‌ಫೋನ್ ಆಮದಾಗಿ ಬಂದಾಗ ಲಲಿತನು ಅದನ್ನು ತೆಗೆದುಕೊಂಡು ಬಂದು, ಕೆಲವು ಬಾರಿ ಶ್ರೀಮಾತೆಗೆ ಕೇಳಿಸಿದ. ಕೀರ್ತನೆಗಳನ್ನು ಹಾಡುತ್ತಿದ್ದ ಪನ್ನಾರಾಣಿಯ ಹಾಡುಗಳು ಶ್ರೀಮಾತೆಯವರಿಗೆ ತುಂಬ ಹಿಡಿಸಿದವು. ಶ್ರೀಮಾತೆಗೆ ಕೀರ್ತನೆಗಳು ಇಷ್ಟವಾದವೆಂದು ನಾನು ನಮ್ಮ ಸ್ನೇಹಿತ ಶ್ರೀಕಿರಣಚಂದ್ರ ದತ್ತನ ಮನೆಯಿಂದ ಗ್ರಾಮೋಫೋನ್ ತಂದು, ಕೆಲವು ದಿನ ಶ್ರೀಮಾತೆಗೆ ಮತ್ತೆ ಮತ್ತೆ ಕೀರ್ತನೆಗಳನ್ನು ಕೇಳಿಸಿದೆ.

*(ಮುಂದುವರಿಯುವುದು)*

೨. ಸ್ವಾಮಿ ವಿರಜಾನಂದರಿಗೆ. *(–ಸಂ)*

೩. ಆತ ಸ್ವಯಂ ಲೇಖಕನೇ. *(–ಅನು.)*